
ಪಡೆಯಬೇಕು, ಕೇಡಿಲ್ಲವಾಗಿ ಬದುಕಬೇಕು.'' ಕೇಡು ಕಳೆದುಕೊಳ್ಳುವ ಹಂಬಲವೇ ಗದಿಗೆಪ್ಪನ ಅಲೆದಾಟದ ಉದ್ದೇಶವಾಗಿದೆ.

ಅಲೆಮಾರಿ ಗದಿಗೆಪ್ಪನಿಗೆ ಎದುರಾಗುವ ಬಹುತೇಕ ಪಾತ್ರಗಳು "ಯಾವೂರು? ಯಾವ ಕುಲ? ನಿಮ್ಮ ಧರ್ಮ ಯಾವುದು? ಇಲ್ಲಿಗೆ ಬಂದದ್ದು ಯಾಕೆ?' – ಇಂಥ ಯಾವ ಪ್ರಶ್ನೆಗಳನ್ನೂ ಕೇಳುವುದಿಲ್ಲ. ವ್ಯಕ್ತಿಯ ಭೂತಕಾಲದ ಬಗ್ಗೆ ಅನಗತ್ಯ ಕುತೂಹಲವನ್ನು ವ್ಯಕ್ತಪಡಿಸದ ಇಲ್ಲಿನ ಪಾತ್ರಗಳು, ಜಾತಿ ಮತ್ತು ಧರ್ಮಗಳಾಚೆಗೆ ನಿಂತು ಮನುಷ್ಯ ಮನುಷ್ಯನನ್ನು ನೋಡುವ, ಬದುಕನ್ನು ಗ್ರಹಿಸುವ ಕ್ರಮವನ್ನು ನಮ್ಮ ಮುಂದಿಡುತ್ತಿವೆ. ಜಾತಿ–ಧರ್ಮಗಳ ಚೌಕಟ್ಟನ್ನು ಬಿಟ್ಟು ಯೋಚಿಸುವುದೇ ಕಠಿಣವಾಗಿರುವ ಸಾಮಾಜಿಕ ಸಂದರ್ಭದಲ್ಲಿ, ಒಂದು ಆದರ್ಶದ ರೂಪದಲ್ಲಿ ಈ ಕಾದಂಬರಿ ಅಪ್ಪಟ ಮಾನವೀಯ ಸಂವೇದನೆಯೊಂದನ್ನು ನಮ್ಮ ಮುಂದಿಡುತ್ತಿದೆ.

ಪ್ರಕೃತಿ ಸೌಂದರ್ಯದ ಜೊತೆಗೆ ಪ್ರಕೃತಿ ವಿನಾಶದ ಕುರಿತೂ ಕಾದಂಬರಿ ನಮ್ಮ ಗಮನಸೆಳೆಯುತ್ತದೆ. ಊರು–ಕಾಡು–ಹೊಲಗಳೆಲ್ಲ ಗಣಿಗಾರಿಕೆಯ ದೂಳು ಮುತ್ತಿಕೊಂಡಿರುವ ವಿಷಾದದ ಚಿತ್ರಗಳು ಇಲ್ಲಿವೆ. ಗುಡ್ಡಗಳು ಕರಗಿಹೋಗಿವೆ. ಮಾನವೀಯತೆಯ ಸ್ಪರ್ಶವಿಲ್ಲದ ಅಭಿವೃದ್ಧಿ ತರಬಹುದಾದ ಕೇಡುಗಳ ಚಿತ್ರಣ. ಇಪ್ಪತ್ತು ವರ್ಷಗಳ ನಂತರ ಊರಿಗೆ ಬರುವ ಗದಿಗೆಪ್ಪನ ಎದುರು ಎರಡು ಊರುಗಳಿವೆ. ಒಂದು, ಅವನ ಭಾವಜಗತ್ತಿನ ಊರು, ಕಳೆದುಹೋಗಿರುವಂತಹದ್ದು. ಇನ್ನೊಂದು ವಾಸ್ತವದ್ದು, ಬದಲಾವಣೆಯ ಪ್ರಕ್ರಿಯೆಗೆ ಒಡ್ಡಿಕೊಂಡಿರುವಂತಹದ್ದು ಹಾಗೂ ಗದಿಗೆಪ್ಪನಿಗೆ ಅಪರಿಚಿತ ಭಾವ ಉಂಟುಮಾಡುವಂತಹದ್ದು.

ತಾತ ಸಣ್ಣೀರಪ್ಪನ ಸಮಾಧಿಯ ಜೊತೆಗೆ ಮಗ ಗಾಂಧಿ ಹಾಗೂ ನಾಯಿ ಭೈರನ ಸಮಾಧಿಗಳೂ ನಾಶವಾಗಿರುವುದನ್ನು ಗದಿಗೆಪ್ಪ ನೋಡಬೇಕಾಗುತ್ತದೆ. ಎಲ್ಲಕ್ಕೂ ಮುಖ್ಯವಾಗಿ ಗಂಗಪಾಣಿ ಗಿಡ ನಾಶವಾಗಿದೆ. ಊರಿನ ಬದಲಾವಣೆಗಿಂತಲೂ, ತನ್ನ ಹೊಲದ ಬದಲಾವಣೆಗಿಂತಲೂ, ಗದ್ದಿಗೆಪ್ಪನನ್ನು ಹೆಚ್ಚು ಗಾಸಿಗೊಳಿಸುವುದು ಗಂಗಪಾಣಿ ಮರದ ಕೊಲೆ. ಆ ಮರ ಗದ್ದಿಗೆಪ್ಪನ ಪಾಲಿಗೆ ಪವಿತ್ರಜೀವ,




**ಗಂಗಪಾಣಿ**
ಲೇ: ಎಸ್. ಗಂಗಾಧರಯ್ಯ
ಪು: 248; ಬೆ: 280
ಪ್ರ: ಜೀರುಂಡೆ ಪ್ರಕಾಶನ, ಬೆಂಗಳೂರು.
ಫೋನ್: 9742225779

ತಾಯಿ, ಒಂದು ಮೌಲ್ಯ, ನಂಬಿಕೆ – ಎಲ್ಲವೂ ಹೌದು. ಗದಿಗೆಪ್ಪನ ನಂಬಿಕೆಗಳಿಗೆ ಪೆಟ್ಟು ಬಿದ್ದ ಸ್ಥಿತಿ ವರ್ತಮಾನದಲ್ಲಿ ನಮ್ಮ ನಂಬಿಕೆಗಳು ಹುಸಿಯಾಗಿರುವ ಸಂದರ್ಭವೂ ಹೌದು. ಗಾಂಧಿಯನ್ನು, ಮೌಲ್ಯಗಳನ್ನು ಬಿಟ್ಟುಕೊಡಲು ಹಿಂಜರಿಯದೆ, ಆಧುನಿಕತೆಯ ಹೆಸರಿನಲ್ಲಿ ಮಾನವೀಯತೆಯನ್ನು ಗಾಸಿಗೊಳಿಸುವ ಕೇಡುಗಳಿಗೆ ಆಸ್ಪದ ಕಲ್ಪಿಸಿದವರು ನಾವು. ಏನೆಲ್ಲಕ್ಕೆ ನಾವು ಕಾರಣರಾಗಿದ್ದೇವೆ ಎನ್ನುವುದನ್ನು ನೆನಪಿಸುವ ಕೆಲಸವನ್ನು, ನಮ್ಮ ಪ್ರಜ್ಞೆಗೆ ಕವಿದಿರುವ ಮಬ್ಬನ್ನು ತಿಳಿಗೊಳಿಸುವ ಕೆಲಸವನ್ನು 'ಗಂಗಪಾಣಿ' ಮಾಡುತ್ತದೆ. ●